ಕರ್ನಾಟಕ ವಿಧಾನಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	457
ಸದಸ್ಯರ ಹೆಸರು	ಶ್ರೀ ಸುನೀಲ್ ಸುಬ್ರಮಣಿ ಎಂ.ಪಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)
ಉತ್ತರಿಸಬೇಕಾದ ದಿನಾಂಕ	19.02.2018
ಉತ್ತರಿಸುವ ಸಚಿವರು	ಮಾನ್ಯ ಕನ್ನಡ ಮತ್ತು ಸಂಸ್ಕೃತಿ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ, ಹಿರಿಯ ನಾಗರಿಕರ ಸಬಲೀಕರಣ ಸಚಿವರು

ಕ್ರ.ಸಂ	ಪ್ರಶ್ನೆ	ಉತ್ತರ
ಅ)	ಕೊಡಗು ಜಿಲ್ಲೆಯಲ್ಲಿರುವ ಮಡಿಕೇರಿ ತಾಲ್ಲೂಕಿನ ನಾಲ್ಕುನಾಡು ಅರಮನೆ ಪ್ರಸ್ತುತ ರಾಜ್ಯ ಸರ್ಕಾರದ ಸುಪರ್ದಿಯಲ್ಲಿದೆಯೇ;	ಹೌದು
ಆ)	ಇದ್ದಲ್ಲಿ, ಸದರಿ ನಾಲ್ಕುನಾಡು ಅರಮನೆಯನ್ನು ಸುಸ್ಥಿತಿಯಲ್ಲಿ ಕಾಪಾಡಲು ಯಾವ ಕ್ರಮವಹಿಸಲಾಗಿದೆ;	ನಾಲ್ಕುನಾಡು ಅರಮನೆಯ ಪ್ರದೇಶದಲ್ಲಿ ಒತ್ತುವರಿಯಾಗಿದ್ದ ಪ್ರದೇಶವನ್ನು ಜಿಲ್ಲಾಡಳಿತ ಸಹಕಾರದೊಂದಿಗೆ ತೆರವುಗೊಳಿಸಿ ದಿನಾಂಕ:17.05.2012 ರಲ್ಲಿ ಈ ಭಾಗದಲ್ಲಿ 167.20ಮೀ. ಚೇನ್‌ಲಿಂಕ್ ಫೆನ್ಸಿಂಗ್‌ನ್ನು ಅಳವಡಿಸಲಾಗಿದೆ. ಸೋಲಾರ್ ಲೈಟಿಂಗ್ ವ್ಯವಸ್ಥೆ, ಅರಮನೆಗೆ ಪಕ್ಷಿಗಳು ಒಳ ನುಸುಳದಂತೆ ರಕ್ಷಣೆಗೆ ನೈಲಾನ್ ನೆಟ್‌ನ್ನು ಅಳವಡಿಸಲಾಗಿದೆ, ಹಾಳಾಗಿದ್ದ ಕಿಟಕಿಗಳನ್ನು ರಿಪೇರಿ ಮಾಡಿ ಮಸ್ಕಿಟೊ ಮೆಷ್‌ನ್ನು ಅಳವಡಿಸಲಾಗಿದೆ. ಒಟ್ಟಾರೆ ಈ ಕಾಮಗಾರಿಗಳಿಗೆ ರೂ.10.79ಲಕ್ಷಗಳನ್ನು ವೆಚ್ಚ ಮಾಡಲಾಗಿದೆ. ಅರಮನೆಯ ರಕ್ಷಣೆಗಾಗಿ 24x7 ವೇಳಾ ಅವಧಿಗೆ ಭದ್ರತಾ ಸಿಬ್ಬಂದಿಯನ್ನು ನೇಮಿಸಲಾಗಿದೆ.
ಇ)	ಪ್ರಸ್ತುತ ಸಾಲಿನಲ್ಲಿ ನಿರ್ವಹಣೆಗೆ ಬಿಡುಗಡೆ ಮಾಡಲಾದ ಅನುದಾನವೆಷ್ಟು; (ಮಾಹಿತಿ ನೀಡುವುದು)	ಪ್ರಸಕ್ತ ಆರ್ಥಿಕ ಸಾಲಿನಲ್ಲಿ ಅಂದರೆ 2017-18ರಲ್ಲಿ ಯಾವುದೇ ಅನುದಾನವನ್ನು ನಿಗಧಿಪಡಿಸಿಕೊಂಡಿರುವುದಿಲ್ಲ.
ಈ)	ಒಂದು ವೇಳೆ ರಾಜ್ಯ ಸರ್ಕಾರದ ಸುಪರ್ದಿಯಲ್ಲಿಲ್ಲದಿದ್ದಲ್ಲಿ, ಕೇಂದ್ರ ಸರ್ಕಾರಕ್ಕೆ ನಿರ್ವಹಣೆಗಾಗಿ ಪ್ರಸ್ತಾವನೆ ಸಲ್ಲಿಸಲಾಗಿದೆಯೇ? (ಮಾಹಿತಿ ನೀಡುವುದು)	ಸರ್ಕಾರಿ ಆದೇಶ ಸಂಖ್ಯೆ:ಐಟಿವೈ 143 ಕೆಎಂಯು 1984, ದಿನಾಂಕ:13.04.1987ರನ್ವಯ ರಾಜ್ಯ ಸಂರಕ್ಷಿತ ಸ್ಮಾರಕವೆಂದು ಘೋಷಿಸಿರುವುದರಿಂದ ಕೇಂದ್ರ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸುವ ಅಗತ್ಯ ಕಂಡುಬರುತ್ತಿಲ್ಲ.

ಸಂಖ್ಯೆ: ಕಸಂವಾ 13 ಕೆಎಂಯು 2018

(ಉಮಾಶ್ರೀ)
ಕನ್ನಡ ಮತ್ತು ಸಂಸ್ಕೃತಿ,
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ
ಹಾಗೂ ವಿಕಲಚೇತನರ, ಹಿರಿಯ ನಾಗರಿಕರ
ಸಬಲೀಕರಣ ಸಚಿವರು